इण्डियन ओवरसीज़ बैंक
Indian Overseas Bank
आपकी प्रगति का सच्चा साथी
Good people to grow with

# ಫಿಶಿಂಗ್ (Phishing) ದಾಳಿಯನ್ನು (ಇಂಟರ್ನೆಟ್ ಮೂಲಕ ವ್ಯಕ್ತಿಯ ವೈಯಕ್ತಿಕ ಮತ್ತು ಹಣಕಾಸಿನ ಮಾಹಿತಿಯನ್ನು ಕದಿಯುವ ವಿಧಾನ ) ತಡೆಗಟ್ಟಲು ಸಲಹೆಗಳು:

## ವಿಧಿ (ಮಾಡಬೇಕಾದುದ್ದು)

- ಯಾರು ನಿಮಗೆ ಕಳುಹಿಸಿದ್ದಾರೆ ಎಂಬ ವಿಷಯವನ್ನು ಬದಿಗಿಟ್ಟು ನಿಮಗೆ ಬಂದ ಯಾವುದೇ ಲಗತ್ತುಗಳನ್ನು (attachments )ತೆರೆಯುವಾಗ ಅಥವಾ ನೀವು ಸ್ವೀಕರಿಸಿರುವ ಕಡತಗಳನ್ನು ಡೌನ್‌ಲೋಡ್ ಮಾಡುವಾಗ ಜಾಗ್ರತೆಯನ್ನು ವಹಿಸಿ.
- ನೀವು ನಿಮ್ಮ ವೈಯಕ್ತಿಕ ಮಾಹಿತಿಯನ್ನು ಇಮೇಲ್ ಮೂಲಕ ಹಂಚಿಕೊಳ್ಳುವ ಮೊದಲು ನಿಮಗೆ ಇಮೇಲ್ ಕಳುಹಿಸಿ, ಅಂತಹ ಮಾಹಿತಿಯನ್ನು ಕೇಳಿದವರ ಇಮೇಲ್ ಐಡಿಯನ್ನು ಪರಿಶೀಲಿಸಿ.
- **Antivirus, antispyware** ಮತ್ತು **firewall software** ಗಳನ್ನು ಬಳಸಿ (ಅವುಗಳನ್ನು ನಿಯಮಿತವಾಗಿ ನವೀಕರಿಸಿ).
- ನಿಮ್ಮ ವೆಬ್ ಬ್ರೌಸರ್ ಅನ್ನು ಯಾವಾಗಲೂ ನವೀಕರಿಸಿ.
- ನೀವು ಯಾವುದೇ ಅನುಮಾನಾಸ್ಪದ ಇ-ಮೇಲನ್ನು ಸ್ವೀಕರಿಸಿದರೆ, ಅದರ ಅಧಿಕೃತತೆಯನ್ನು ಖಚಿತಪಡಿಸಿಕೊಳ್ಳಲು ಬ್ಯಾಂಕ್‌ಗೆ ಕರೆ ಮಾಡಿ
- ಆನ್‌ಲೈನ್ ಶಾಪಿಂಗ್ ಮತ್ತು ವೈಯಕ್ತಿಕ ವಿಷಯಗಳಿಗಾಗಿ ಪ್ರತ್ಯೇಕ ಇಮೇಲ್ ಖಾತೆಗಳನ್ನು ಉಪಯೋಗಿಸಿ .ಇತ್ಯಾದಿ.

## ನಿಷೇಧ (ಮಾಡಬಾರದ್ದು)

• ವೈಯಕ್ತಿಕ ಅಥವಾ ಹಣಕಾಸಿನ ಮಾಹಿತಿಯನ್ನು ಕೇಳುವ ಇಮೇಲ್ ಅಥವಾ ಪಾಪ್-ಅಪ್(**pop - up**)ಸಂದೇಶಗಳಿಗೆ ಪ್ರತ್ಯುತ್ತರಿಸಬೇಡಿ.

•ಇಮೇಲ್ ಮೂಲಕ ನಿಮ್ಮ ವೈಯಕ್ತಿಕ ಅಥವಾ ಹಣಕಾಸಿನ ಮಾಹಿತಿಯನ್ನು ಕಳುಹಿಸಬೇಡಿ. ಅಂದರೆ ಕ್ರೆಡಿಟ್ ಕಾರ್ಡ್ ಅಥವಾ ಇತರ ಸೂಕ್ಷ್ಮ ಮಾಹಿತಿಗಳನ್ನು ಇಮೇಲ್ ಮುಖಾಂತರ ಹಂಚಿಕೊಳ್ಳಬೇಡಿ.

• ನೀವು ನಿರೀಕ್ಷಿಸದ ಅಥವಾ ನಿಮಗೆ ಅಗತ್ಯವಿಲ್ಲದ ಯಾವುದೇ ಇಮೇಲ್ ಅಥವಾ ಸಾಮಾಜಿಕ ಮಾಧ್ಯಮ ಸಂದೇಶಗಳ ಮೇಲೆ ಕ್ಲಿಕ್ ಮಾಡಬೇಡಿ.

• ನಿಮಗೆ ಅನಧಿಕೃತವೆಂದು ಅನುಮಾನವಿರುವ ಯಾವುದೇ ಇಮೇಲನ್ನು ತೆರೆಯಬೇಡಿ. ಅದು ಅಧಿಕೃತವಾಗಿದ್ದು ಅದನ್ನು ಕಳುಹಿಸಿದ ವ್ಯಕ್ತಿಗೆ ಅದರ ಅವಶ್ಯಕತೆ ಇದ್ದರದ್ದೇ ಆದರೆ ನಿಮ್ಮನ್ನು ಅನ್ಯ ಮಾರ್ಗಗಳಿಂದ ಸಂಪರ್ಕಿಸುವ ಪ್ರಯತ್ನವನ್ನು ಅವರು ಅವಶ್ಯವಾಗಿ ಮಾಡುತ್ತಾರೆ

• ನೀವು ನಿರೀಕ್ಷಿಸದಿರುವ ಲಗತ್ತುಗಳನ್ನು(**attachments**)ತೆರೆಯಬೇಡಿ, ವಿಶೇಷವಾಗಿ **ZIP** ಫೈಲ್‌ಗಳು ಮತ್ತು**.exe** ಫೈಲ್‌ಗಳನ್ನು ಎಂದಿಗೂ ರನ್ ಮಾಡಬೇಡಿ.

• ವೈಯಕ್ತಿಕ ವಿಷಯಗಳಿಗಾಗಿ ನಿಮ್ಮ ಕಂಪನಿಯ ಇಮೇಲ್ ವಿಳಾಸವನ್ನು ಬಳಸಬೇಡಿ.

• ಯಾವುದೇ **spam e-mail** ನ್ನು ತೆರೆಯಬೇಡಿ.

• ಸಾಮಾಜಿಕ ನೆಟ್‌ವರ್ಕಿಂಗ್ ಸೈಟ್‌ಗಳಲ್ಲಿ ಅನುಮಾನಾಸ್ಪದ ವೀಡಿಯೊಗಳು ಅಥವಾ ಚಿತ್ರಗಳನ್ನು ತೆರೆಯಬೇಡಿ. ಏಕೆಂದರೆ ಅವುಗಳು ಫಿಶಿಂಗ್‌ನ (**Phishing**) ಪ್ರಮುಖ ಗುರಿಯಾಗಿರುತ್ತವೆ.

• ಬ್ಯಾಂಕ್ ವಿವರಗಳನ್ನು ಕೇಳುವ ಫೋನ್ ಕರೆಗಳಿಗೆ ಎಂದಿಗೂ ಪ್ರತಿಕ್ರಿಯಿಸಬೇಡಿ. ಇದು ವಿಶಿಂಗ್ **(Vishing)** ಆಗಿರಬಹುದು **(Voice Phishing).**

•"ಕದ್ದ" ಅಥವಾ "ಕಳೆದುಹೋದ" ನಿಮ್ಮ ಖಾತೆಯ ಮಾಹಿತಿಯನ್ನು ಧೃಡೀಕರಿಸಲು ನಿಮಗೆ ಬಂದ ಯಾವುದೇ ಸಂದೇಶಗಳಿಗೆ **(SMS)** ಪ್ರತಿಕ್ರಿಯಿಸಬೇಡಿ. ಅಥವಾ ಬಹುಮಾನದ ಆಸೆಯನ್ನೊಡ್ಡಿ ನಿಮ್ಮ ವೈಯಕ್ತಿಕ ಮಾಹಿತಿಯನ್ನು ಬಹಿರಂಗಪಡಿಸಲು ನಿಮ್ಮನ್ನು ಪ್ರೇರೇಪಿಸುವ ಯಾವುದೇ ಸಂದೇಶಗಳಿಗೂ ಸಹ ಪ್ರತಿಕ್ರಿಯಿಸಬೇಡಿ. ಇದು ಒಂದು ತರಹದ ಫಿಶಿಂಗ್ **(P.hishing)** ನ ರೂಪವಾಗಿರುವ ಸಾಧ್ಯತೆಯು ಅಧಿಕವಾಗಿರುತ್ತದೆ.